**ಕಲ್ಲೇಶಿ:** ಲವ್ ಮಾಡುವುದರಿಂದ ಹಾರ್ಟ್ ಅಟ್ಯಾಕ್ ಆಗಲ್ಲಂತೆ. ಅದಕ್ಕೆ ನಾನು ಲವ್ ಮಾಡ್ತಿದ್ದೀನಿ.
**ಮಲ್ಲೇಶಿ:** ಅದು ಹೇಗೋ ಸಾಧ್ಯ?
**ಕಲ್ಲೇಶಿ:** ಲವ್ ಮಾಡುವಾಗ ನಮ್ಮ ಹೃದಯ ನಮ್ಮ ಹತ್ರ ಇರಲ್ಲ. ಪ್ರೇಯಸಿಗೆ ಕೊಟ್ಟಿರ್ತೀವಿ. ಹೀಗಾಗಿ ಹಾರ್ಟ್ ಅಟ್ಯಾಕ್ ಆಗೋದಿಲ್ಲ.

**ಗುಂಡ:** ರಾತ್ರಿ ನನ್ನ ದೇಹದಲ್ಲಿ ಭೀಷ್ಮ ಪಿತಾಮಹ, ಕುಂಭಕರ್ಣನ ಆತ್ಮ ಸೇರಿಕೊಂಡಿರುತ್ತದೆ. ಬೆಳ್ಳಿಗೆ ಬೇಗ ಏಳಬೇಕೆಂದು ಪ್ರತಿಜ್ಞೆ ಮಾಡುತ್ತೇನೆ.
**ತಿಮ್ಮ:** ಹೌದಾ ಆಮೇಲೆ?
**ಗುಂಡ:** ಬೆಳಿಗ್ಗೆ ಏಳಬೇಕೆಂದುಕೊಂಡಾಗ ದೇಹದಲ್ಲಿ ಕುಂಭಕರ್ಣನ ಆತ್ಮ ಸೇರಿಕೊಂಡಿರುತ್ತೆ ಕಣೋ.

**ಜೈಲರ್:** ನಿಮ್ಮ ಎಂಟರ್‌ಟೈನ್‌ಮೆಂಟ್‌ಗಾಗಿ ಇವತ್ತಿನಿಂದ ದಿನ ಸಂಜೆ ಒಂದು ತಾಸು ನನ್ನ ಹೆಂಡತಿ ನಿಮಗೋಸ್ಕರ ಹಾಡುತ್ತಾಳೆ.
**ಕೈದಿಗಳು:** ಸಾರ್ ಇದಕ್ಕೆ ನಮ್ಮ ವಿರೋಧವಿದೆ. ಕಾರಣ ಈ ಶಿಕ್ಷೆ, ನಮಗೆ ವಿಧಿಸಿರುವ ಶಿಕ್ಷೆಯ ಪಟ್ಟಿಯಲ್ಲಿ ಇಲ್ಲ.




**ಹೆಂಡತಿ:** ಪಕ್ಕದ ಮನೆಯವಳು ಹೊಸ ನೆಕ್ಲೇಸ್ ತಗೊಂಡಿದ್ದಾಳಂತೆ. ನನಗೂ ಒಂದು ಹೊಸ ನೆಕ್ಲೇಸ್ ಕೊಡಿಸ್ರಿ.
**ಗಂಡ:** ಪಕ್ಕದ ಮನೆಯವ ಎರಡನೇ ಲಗ್ನ ಆಗಿದ್ದಾನೆ. ಹಾಗಂತ ನಾನು ಇನ್ನೊಂದ್ ಮದುವೆ ಆಗ್ತೀನಿ ಅಂತ ಕೇಳಿದ್ನಾ?




ಗುಂಡ ಬಸ್‌ನಲ್ಲಿ ನಿಂತುಕೊಂಡೇ ಪ್ರಯಾಣಿಸುತ್ತಿದ್ದ.
**ಸಹ ಪ್ರಯಾಣಿಕ:** ಸೀಟಿದ್ದರೂ ಯಾಕೆ ನಿಂತುಕೊಂಡಿದ್ದೀರಿ. ಬನ್ನಿ ಕುಳಿತುಕೊಳ್ಳಿ.
**ಗುಂಡ:** ಬೇಡ ಬಿಡಿ ಸಾರ್! ಈಗಾಗಲೇ ತುಂಬ ಲೇಟ್ ಆಗಿದೆ. ಕುಳಿತುಕೊಂಡು ಹೋದರೆ ಇನ್ನೂ ಲೇಟ್ ಆಗುತ್ತೆ.

**ತಾಯಿ:** ಚಿಂಟು ಏನು ಮಾಡ್ತಿದ್ದೀಯಾ?
**ಚಿಂಟು:** ಓದುತ್ತಾ ಕುಳಿತಿದ್ದೇನೆ ಅಮ್ಮ
**ತಾಯಿ:** ಗುಡ್ ಬಾಯ್! ಏನ್ ಓದ್ತಿದ್ದೀಯಾ?
**ಚಿಂಟು:** ಮುಂದೆ ನಿನ್ನ ಸೊಸೆಯಾಗೋ ಹುಡುಗಿಯ ವ್ಯಾಟ್ಸ್‌ಆ್ಯಪ್ ಮೆಸೇಜ್ ಮತ್ತು ಸ್ಟೇಟಸ್!

**ಗುಂಡ:** ವೈನ್ ಶಾಪಿಂದ ಎಣ್ಣೆ ಬಾಟಲ್ ತರುವಾಗ ಅಪ್ಪ ಎದುರಿಗೆ ಬಂದ್ರು.
**ತಿಮ್ಮ:** ಸಿಕ್ಕಿಬಿದ್ಯಾ, ಚೆನ್ನಾಗಿ ಒದೆ ಬಿದ್ದಿರಬೇಕಲ್ವಾ?
**ಗುಂಡ:** ಇಲ್ಲ ಕಣೋ. ಬಾಟಲ್ ಅಪ್ಪನ ಕೈಗೆ ಕೊಟ್ಟು 'ಹ್ಯಾಪಿ ಫಾದರ್ಸ್ ಡೇ ಡ್ಯಾಡಿ' ಅಂತ ಹೇಳ್ದೆ. ಅವರೂ ಸಿಕ್ಕಾಪಟ್ಟೆ ಖುಷಿಪಟ್ಟರು ಬಾಟಲ್ ಕೊಟ್ಟಿದ್ದಕ್ಕೆ.

**ತಿಮ್ಮ:** ಮನುಷ್ಯನ ಮೆದುಳು ಎರಡು ಬಾರಿ ಮಾತ್ರ ಕೆಲಸ ಮಾಡಲ್ವಂತೆ.
**ಗುಂಡ:** ಏನು? ಎರಡು ಬಾರಿ ಕೆಲಸ ಮಾಡಲ್ವ, ಯಾವಾಗ?
**ತಿಮ್ಮ:** ಒಮ್ಮೆ ಎಕ್ಸಾಂ ಬರೆಯುವಾಗ, ಮತ್ತೊಮ್ಮೆ ಮದುವೆಯಾಗೋಕೆ ಹುಡುಗಿ ಆರಿಸುವಾಗ.

**ಚಿತ್ರಗುಪ್ತ:** ನೀನು ಭೂಮಿಯ ಮೇಲೆ ಏನೇನು ಮಾಡಿದೆ?
**ಮನುಷ್ಯ:** ಏನು ಮಾಡಲು ಆಗಲಿಲ್ಲ ಸ್ವಾಮಿ. ಅರ್ಧ ಆಯಸ್ಸು ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್, ವೋಟರ್ ಐಡಿ, ಪ್ಯಾನ್ ಕಾರ್ಡಿಗೆ ಆಧಾರ್ ಕಾರ್ಡ್, ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಿಸುವುದರಲ್ಲೇ ಕಳೆಯಿತು. ಇನ್ನರ್ಧ ಆಯಸ್ಸು ರೇಷನ್ ಕಾರ್ಡ್‌ಗೆ ಕೆ.ವೈ.ಸಿ. ಮಾಡಿಸೋಕೆ, ಮನೆ ಕಟ್ಟೋದಕ್ಕೆ ಅನುಮತಿಗಾಗಿ, ಜಮೀನಿನ ಪಹಣಿಗೆ ಆಧಾರ್ ಲಿಂಕ್ ಮಾಡಿಸೋಕೆ, ವಿದ್ಯುತ್ ಸಂಪರ್ಕ ಪಡೆಯೋಕೆ ಹೀಗೆ ಅದು ಇದು ಅಂತ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದರಲ್ಲೇ ಕಳೆದು ಹೋಯ್ತು. ಪಾಪ ಪುಣ್ಯದ ಯಾವ ಕೆಲಸನೂ ಮಾಡಲಾಗಲಿಲ್ಲ.
**ಚಿತ್ರಗುಪ್ತ:** ಹೌದಾ, ನಿನ್ನ ನರಕದ ಶಿಕ್ಷೆಯನ್ನೆಲ್ಲ ಭೂಲೋಕದಲ್ಲೇ ಕಳೆದಿದ್ದೀಯಾ. ನಡಿ ಸ್ವರ್ಗಕ್ಕೆ.

**ಗುಂಡ:** ಪ್ರೀತಿ ಯಾಕೆ ಭೂಮಿ ಮೇಲಿದೆ?
**ತಿಮ್ಮ:** ಏಕೆಂದರೆ ಬೇರೆ ಗ್ರಹಗಳಲ್ಲಿ ಪಾರ್ಕ್, ಥಿಯೇಟರ್, ಲಾಡ್ಜ್, ಪಬ್ ಇಲ್ಲ ಅದಕ್ಕೆ.

**ಭಿಕ್ಷುಕ:** ಅಮ್ಮಾ ಒಂದು ರೊಟ್ಟಿ ಹಾಕಿ.
**ಮಹಿಳೆ:** ಇವತ್ತು ರೊಟ್ಟಿ ಮಾಡಿಲ್ಲಪ್ಪ. ಅನ್ನ, ಸಾಂಬಾರು ಕೊಡ್ತೀನಿ ಇರು.
**ಭಿಕ್ಷುಕ:** ಮತ್ತೆ ಇವತ್ತಿನ ಅಡುಗೆ ರೊಟ್ಟಿ, ಪಲ್ಯ ಅಂತ ಸ್ಟೇಟಸ್ ಹಾಕಿದ್ದೀರಲ್ಲ?

**ಸುಬ್ಬಿ:** ರೀ ಹೊಸ ಸೀರೆ ಕೊಡಿಸಿ.
**ಸುಬ್ಬ:** ಈಗ ಹೊಸ ಸೀರೆ ಯಾಕೆ? ನಿನ್ ಹತ್ರ ಇರೊವೆಲ್ಲ ಸಾಲಲ್ಲವೇ?
**ಸುಬ್ಬಿ:** ಬರೀ 150 ಸೀರೆ ಅಷ್ಟೆ ಇರೋದು.
**ಸುಬ್ಬ:** ಅವುಗಳನ್ನೆಲ್ಲ ದಿನಕ್ಕೆ ಒಂದೊಂದು ಉಟ್ಟರೂ ಐದು ತಿಂಗಳು ಉಡಬಹುದಲ್ವೆ?
**ಸುಬ್ಬಿ:** ಉಳಿದ 7 ತಿಂಗಳಿಗೆ ಏನ್ ಮಾಡ್ಲಿ?

**ಪತ್ನಿ:** ಗನ್ ಹಿಡಿದುಕೊಂಡು ಇಷ್ಟೊತ್ತಿನಲ್ಲಿ ಎಲ್ಲಿಗೆ ಹೊರಟ್ರಿ?
**ಪತಿ:** ಹುಲಿ ಬೇಟೆಗೆ ಕಣೇ.
**ಪತ್ನಿ:** ಮತ್ಯಾಕೇ ಇಲ್ಲಿ ನಿಂತಿದ್ದೀರಿ?
**ಪತಿ:** ಹೊರಗಡೆ ನಾಯಿ ನಿಂತಿದೆಯಲ್ಲ ಅದನ್ನು ಸ್ವಲ್ಪ ಓಡಿಸೆ ಪ್ಲೀಸ್!

ಸಂಗ್ರಹ: ಶರದ ಕುಲಕರ್ಣಿ, ಬೀದರ್